ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Wednesday, 19th February 1975/Magha 30, 1896 S.E.

The House met in the Assembly Chamber, **Vidhana Soudha**, at One of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(To which oral answers were given)

Hostel Facilities to SC/ST Students of Junior Colleges

32. Sri BAPU GOWDA (Shahapur).—

Will the Minister for Education be pleased to state :—

(*a*) the number of Junior Colleges in the State ;

(*b*) the strength of the Scheduled Castes and Scheduled Tribes in these colleges ;

(*c*) whether any hostel facilities have been provided to these Scheduled Castes/Scheduled Tribes Students ?

Sri M. MALLIKARJUNASWAMY (Minister for Education).—

(*a*) (i) Independent Junior Colleges — 64

(ii) High Schools to which P.U.E. Class have been added — 255

Total ... — 319

	S.C.	S.T.
(*b*) (i) Independent Junior Colleges	783	69
(ii) High School to which P.U.E. Classes have been added.	2489	309
Total ...	3272	378
		3650

(*c*) Yes.

ಶ್ರೀ ಬಾಪುಗೌಡ.—ಸ್ವಾಮಿ, ತಮ್ಮ ಉತ್ತರದಲ್ಲಿ ನ್ಪತಂತ್ರ ಜೂನಿಯರ್ ಕಾಲೇಜ್‌ಗಳು 64, ಪಿ.ಯು.ಇ. ತರಗತಿಯನ್ನು ಸೇರಿಸಿರುವ ಫ್ರೌಢಶಾಲೆಗಳು 255 ಒಟ್ಟು 319 ಕಾಲೇಜುಗಳು ಇವೆ ಎಂದು ಹೇಳಿದ್ದೀರಿ. ಒಟ್ಟು ಷೆಡ್ಯೂಲ್ ಕ್ಯಾಸ್ಟ್ ಷೆಡ್ಯೂಲ್ ಟ್ರೈಬ್ಸ್ ವಿದ್ಯಾರ್ಥಿಗಳು 3272 ಇದ್ದಾರೆಂದು ಹೇಳಿದ್ದೀರಿ. ಅವರಿಗೆ 1974-75ರಲ್ಲಿ ಹಾಸ್ಟರ್ ಸಾಕಾರ್ಯವನ್ನು ಒದಗಿಸಿ ಕೊಟ್ಟಿದ್ದೀರಾ ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸುಮಾರು 405 ಜನಕ್ಕೆ ನಾವು ಹಾಸ್ಟಲ್ ಸೌಕರ್ಯವನ್ನು ಒದಗಿಸಿಕೊಟ್ಟಿದ್ದೇವೆ.

ಶ್ರೀ ಬಾಪುಗೌಡ.—ಫ್ರೌಢಶಾಲೆಗಳು ಪಿ.ಯು.ಇ. ಕಾಲೇಜ್‌ಗಳು ಏನಿವೆ ಅವು ವಿಶೇಷವಾಗಿ ತಾಲ್ಲೂಕ್ ಮಟ್ಟದಲ್ಲಿವೆ. ತಾಲ್ಲೂಕ್ ಮಟ್ಟದಲ್ಲಿರತಕ್ಕಂಥ ಆ ಹುಡುಗರಿಗೆ ಯಾವರೀತಿಯ ಹಾಸ್ಟರ್ ಸೌಲಭ್ಯವನ್ನು ಕೊಟ್ಟಿಲ್ಲ ಇದನ್ನು ತಾವು ಒಪ್ಪುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ತಾಲ್ಲೂಕ್ ಮಟ್ಟದಲ್ಲಿ ಎಂದರೆ ಬೇರೆ ಬೇರೆ ಹಾಸ್ಟರ್‌ಗಳಿರುತ್ತವೆ. ಅಲ್ಲಿ ಬೇರೆಬೇರೆಯವರನ್ನು ಸೇರಿಸಿಕೊಳ್ಳುವುದಕ್ಕೆ ಅವಕಾಶವಿರುತ್ತದಷ್ಟೆ.

ಶ್ರೀ ಬಾಪುಗೌಡ.—ಈಗ ತಾಲ್ಲೂಕ್ ಮಟ್ಟದಲ್ಲಿರತಕ್ಕಂಥ ಜನರರ್ ಹಾಸ್ಟರ್‌ಗಳು ಏನಿವೆ ಅಲ್ಲಿ ವಿಶೇಷವಾಗಿ ಫ್ರೌಢಶಾಲೆಗಳಲ್ಲಿ ಅಭ್ಯಾಸ ಮಾಡತಕ್ಕಂಥ ಎಸ್.ಸಿ. ಮತ್ತು ಎಸ್.ಟಿ. ಹುಡುಗರಿಗೆ ಮಾತ್ರ ಪ್ರವೇಶವಿದೆ. ಪಿ.ಯು ಇ. ಹುಡುಗರಿಗೆ ಯಾವ ಸಾಲಭ್ಯವೂ ಇಲ್ಲ, ಅವರಿಗೆ ಆ ಒಂದು ಸೌಲಭ್ಯವನ್ನು ಒದಗಿಸಿಕೊಡುವುದಕ್ಕೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಿಡ್ಲ್‌ಸ್ಕೂಲ್, ಹೈಸ್ಕೂಲ್‌ನಲ್ಲಿ ಓದತಕ್ಕಂಥ ಹುಡುಗರ ಜೊತೆಯಲ್ಲಿ ಅವರನ್ನು ಸೇರಿಸತಕ್ಕಂಥದ್ದು ಕಷ್ಟವಾಗುತ್ತದೆ. ಸಮಾಜ ಕಲ್ಯಾಣ ಇಲಾಖೆಯವರು ಇವತ್ತು ಹಾಸ್ಟರ್‌ಗಳನ್ನು ನಡೆಸುತ್ತ ಇರುವುದರಿಂದ ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಅವರಿಗೆ ಹಾಕತಕ್ಕಂಥದ್ದು ಸೂಕ್ತ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ ಒಟ್ಟು 3650 ಹುಡುಗರು ಗ್ರಾಮಾಂತರ ಪ್ರದೇಶದ ಕಾಲೇಜುಗಳಲ್ಲಿ ಅಧ್ಯಯನ ಮಾಡತಕ್ಕಂಥವರಿದ್ದಾರೆಂದು ಹೇಳಿದಿರಿ. ಅದರಲ್ಲಿ ಕೇವಲ 400 ಜನಕ್ಕೆ ಮಾತ್ರ ಹಾಸ್ಟಲ್ ಸಾಕಾರ್ಯವನ್ನು ಒದಗಿಸಿಕೊಟ್ಟಿದ್ದೇವೆಂದು ತಾವು ಈಗ ಹೇಳಿದಿರಿ. ಅಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರಿಗೆ ಹಾಸ್ಟರ್ ಸಾಕಾರ್ಯವನ್ನು ಕೊಡುವುದಕ್ಕೆ ನೀವು ಮಾಡಿರತಕ್ಕಂಥ ವಿಶೇಷವಾದು ಯಾವುದು ಸ್ವಾಮಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸಾಮಾನ್ಯವಾಗಿ ತಾಲ್ಲೂಕ್ ಮಟ್ಟದಲ್ಲಿ ಈ ತೊಂದರೆ ಇದ್ದೇ ಇದೆ. ಆದರೆ ಮೊದಲು ಕೊಟ್ಟ ಸಮಾಚಾರದ ಜೊತೆಗೆ ಇನ್ನು ಕೆಲವು ವಿವರಗಳನ್ನು ಕೊಡುತ್ತೇನೆ. ಷೆಡ್ಯೂಲ್ ಕ್ಯಾಸ್ಟ್‌ಗಳವರಿಗೆ 7 ೧7, ಷೆಡ್ಯೂಲ್ ಟ್ರೈಬ್ಸ್‌ನವರಿಗೆ 69, ಡೀನೋಟಿಫೈಡ್ ಟ್ರೈಬ್ಸ್‌ಗೆ 40. ಈರೀತಿ ೨೫೨ ಜನ ವಿದ್ಯಾರ್ಥಿಗಳಿಗೆ ನಾವು ಈಗಾಗಲೇ ವಿದ್ಯಾರ್ಥಿನಿಲಯದ ಸಾಕಾರ್ಯವನ್ನು ಒದಗಿಸಿಕೊಟ್ಟಿದ್ದೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ ಜನರರ್ ಹಾಸ್ಟರ್‌ಗಳಲ್ಲಿ ಎಲ್ಲಾ ಸೀಟ್‌ಗಳಿಗೂ ಪ್ರವೇಶ ತೆಗೆದುಕೊಂಡು, ಹರಿಜನರ ಸೀಟ್ಸ್ ಖಾಲಿ ಹಾಗೆಯೇ ಉಳಿದರೆ ಆ ಜಾಗಕ್ಕೆ ಬೇರೆ ಇತರೆ ಜನಾಂಗದ ಹುಡುಗರಿಗೆ ಪ್ರವೇಶ ಕೊಡುವುದಕ್ಕೆ ರೂಲ್ಸ್‌ನ್ನು ರಿರ್ಯಾಕ್ಸ್ ಮಾಡುವುದಕ್ಕೆ ಅನುಮತಿ ಕೊಡುತ್ತೀರಾ ಸ್ವಾಮಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರು ಕಾಲೇಜು ಹುಡುಗರ ಹಾಸ್ಟರ್ ಸಾಲಭ್ಯದ ಬಗ್ಗೆ ಪ್ರಶ್ನೆ ಕೇಳಿದ್ದರು ಅದಕ್ಕೆ ಉತ್ತರವನ್ನು ಒದಗಿಸಿದ್ದೇವೆ. ತಮ್ಮ ಪ್ರಶ್ನೆಗೆ ಉತ್ತರ ಬೇಕಾಗಿದ್ದರೆ ಸಮಾಜ ಕಲ್ಯಾಣ ಇಲಾಖೆಯವರಿಗೆ ಪ್ರಶ್ನೆ ಹಾಕಬಹುದು.

ಶ್ರೀ ಜೆ. ಎಲ್. ಕಬಾಡಿ.—ಕಾಲೇಜು ವಿದ್ಯಾರ್ಥಿಗಳಿಗೆ ಹಾಸ್ಟಲ್‌ಗಳಲ್ಲಿ ಪ್ರವೇಶ ಸಿಕ್ಕದೆ ಹಾಗೆಯೇ ಹೊರಗಡೆ ಇದ್ದು ತುಂಬಾ ಕಷ್ಟವನ್ನು ಅನುಭವಿಸುತ್ತಾ ಇದ್ದಾರೆ. ಕಾಲೇಜ್ ಹಾಸ್ಟಲ್‌ಗಳನ್ನು ತೆಗೆಯರಿ ಎಂದು ಹೇಳಿ ಸಾಕಷ್ಟು ಮನವಿಗಳನ್ನು ಸದಸ್ಯರ ಮುಖಾಂತರ ತಮಗೆ ಕಳುಹಿಸಿರುವುದು ನಿಜವೇ ?

---

†Indicates that remarks or speeches have not been revised by the member concerned.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ನಾವು ಎಲ್ಲಾ ಹುದುಗರಿಗೂ ಹಾಸ್ಟಲ್ ಸೌಲಭ್ಯವನ್ನು ಕೊಡುತ್ತೇವೆಂದು ಹೇಳುವುದಕ್ಕೆ ಆಗುವುದಿಲ್ಲ. ಈ ಪ್ರಶ್ನೆಯನ್ನು ಸಮಾಜ ಕಲ್ಯಾಣ ಇಲಾಖೆಯವರಿಗೆ ಹಾಕಬೇಕು.

ಶ್ರೀ ಬಾಪುಗೌಡ.—ತಮ್ಮ ಹೇಳಿಕೆಯ ಪ್ರಕಾರ ನಮಾರು 2 ಸಾವಿರ ಸಂಖ್ಯೆಯು ಹುಡುಗರಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ಹಾಸ್ಟಲ್ ಸೌಲಭ್ಯ ಇಲ್ಲ. ತಾವು ಇನ್ನು ಮುಂದಾದರೂ ಕೂಡ ಸಮಾಜ ಕಲ್ಯಾಣ ಇಲಾಖೆಯವರ ಗಮನಕ್ಕೆ ಈ ವಿಷಯವನ್ನು ತಂದು ತಾಲ್ಲೂಕ್ ಮಟ್ಟದಲ್ಲಿರುವ ಪಿ.ಯು.ಇ. ಓದತಕ್ಕಂಥ ವಿದ್ಯಾರ್ಥಿಗಳಿಗೆ ಹಾಸ್ಟಲ್ ಸೌಲಭ್ಯವನ್ನು ಒದಗಿಸಿ ಕೊಡತಕ್ಕಂಥ ದ್ದಕ್ಕೆ ಭರವಸೆ ಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದನ್ನು ಪರಿಶೀಲನೆ ಮಾಡಬೇಕು ; over a number of years this question will have to be tackled.

Filling up of Class II Posts in Education Department

34. Sri V. M. GHADI (Haliyal).—

Will the Minister for Education be pleased to state :—

(*a*) the number of Officers appointed as incharge on Class II Posts in Education Department under Rule 32 of Karnataka Civil Services Rules during the last year ;

(*b*) whether it is a fact that the persons serving under the provision of Rule 32 of Karnataka Civil Services Rules cannot be retained for more than six months ;

(*c*) the number of Class II posts kept vacant particularly in the Office of the Deputy Director of Public Instruction, Karwar and in the State during last year ;

(*d*) whether it has come to the notice of the Government that large number of unemployed persons are in search of jobs ;

(*e*) if so, the reasons why the Government has not employed some of these suitable persons to serve in Education Department ?

Sri M. MALLIKARJUNASWAMY (Minister for Education).—

(*a*) 20 posts including 16 posts of taken-over Schools during 1974-75 (upto 15th January 1975).

(*b*) No.

(*c*) Two posts in the Office of the Deputy Director of Public Instruction, Karwar and 58 posts in the State including 8 vacancies of taken-over Schools.

(*d*) Yes.

(*e*) As per the Cadre and Recruitment Rules of the Department of Public Instruction, all the vacant posts in Class II cannot be filled up by direct recruitment. Only 50 per cent of the vacancies can be filled up through the Public Service Commission from among the duly qualified persons. As against vacancies availble for direct recruitment 113 candidates were appointed during 1973-74.